ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ,

**ಆರೋಗ್ಯ ಸೌಧ, ಮಾಗಡಿ ರಸ್ತೆ, ಬೆಂಗಳೂರು –560023.**

ಸಂ: ಡಿಹೆಚ್ಎಸ್/ಬಿಇಸಿ/63/2021–22 ದಿನಾಂಕ: 11.03.2022

## ಅಧಿಸೂಚನೆ

**ವಿಷಯ:** 2018–19 ನೇ ಸಾಲಿನಲ್ಲಿ ಸ್ನಾತಕೋತ್ತರ ಪದವಿ/ಡಿಪ್ಲೋಮಾ ವ್ಯಾಸಂಗಕ್ಕೆ ದಾಖಲಾತಿ ಹೊಂದಿ ಆಯ್ಕೆಗೊಂಡು 2021 ನೇ ಸಾಲಿನಲ್ಲಿ ಉತ್ತೀರ್ಣರಾಗಿರುವ ತಜ್ಞ ವೈದ್ಯರುಗಳನ್ನು ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಗೆ ನಿಯುಕ್ತಿಗೊಳಿಸಿರುವ ತಜ್ಞ ವೈದ್ಯರಿಗೆ ಸ್ಥಳ ಬದಲಾವಣೆ ಮಾಡುವ ಬಗ್ಗೆ.

**ಉಲ್ಲೇಖ:** 1. ಆಯುಕ್ತಾಲಯದ ಆದೇಶ ಸಂಖ್ಯೆ: ಡಿಹೆಚ್ಎಸ್ ಬಿಇಸಿ 51 2021–22 ದಿನಾಂಕ 22.12.2021 ಮತ್ತು 14.01.2022

2. ಸದರಿ ವೈದ್ಯರ ಮನವಿ ಪತ್ರಗಳನ್ವಯ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಲ್ಲಿ ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆ ಸಲ್ಲಿಸಲು ತಜ್ಞ ವೈದ್ಯರುಗಳಿಗೆ ಈಗಾಗಲೇ ಆನ್‌ಲೈನ್ ಸಮಾಲೋಚನೆಯ ಮುಖಾಂತರ ಸ್ಥಳ ನಿಯುಕ್ತಿಗೊಳಿಸಿ ಆದೇಶ ಹೊರಡಿಸಲಾಗಿದೆ.

ಆದರೆ ಉಲ್ಲೇಖ(2)ರಲ್ಲಿ ಸದರಿ ತಜ್ಞ ವೈದ್ಯರುಗಳು ಸ್ಥಳ ಬದಲಾವಣೆ ಕೋರಿ ಮನವಿಗಳನ್ನು ಸಲ್ಲಿಸಿದ್ದು, ತಜ್ಞ ವೈದ್ಯರುಗಳ ಮೆರಿಟ್ ಆಧಾರದ ಅನುಸಾರ ಸಮಾಲೋಚನೆ ಮುಖಾಂತರ ಸ್ಥಳ ನಿಯುಕ್ತಿಗೊಳಿಸಲು, ಅಭ್ಯರ್ಥಿಗಳ ಮೆರಿಟ್ ಪಟ್ಟಿಯನ್ನು ಹಾಗೂ ಖಾಲಿ ಹುದ್ದೆಗಳ ಮಾಹಿತಿಯನ್ನು ಇಲಾಖಾ ಅಂತರ್ಜಾಲ (https://karunadu.karnataka.gov.in) ರಲ್ಲಿ ಪ್ರಚುರಪಡಿಸಲಾಗುವುದು.

ಸ್ಥಳ ಬದಲಾವಣೆ ಮಾಡಲು ದಿನಾಂಕ: 18.03.2022ರಂದು ಪೂರ್ವಾಹ್ನ 10.00 ಗಂಟೆಗೆ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ, ಮೊದಲನೇ ಮಹಡಿ, ಸೆಮಿನಾರ್ ಹಾಲ್, ಕುಷ್ಠರೋಗ ಆಸ್ಪತ್ರೆ ಆವರಣ, ಮಾಗಡಿ ರಸ್ತೆ, ಬೆಂಗಳೂರು–23 ಇಲ್ಲಿ ಸಮಾಲೋಚನೆಗೆ ಹಾಜರಾಗಲು ತಿಳಿಸಿದೆ.

**ಸೂಚನೆ:–** ಸಮಾಲೋಚನೆಗೆ ಹಾಜರಾಗುವ ತಜ್ಞ ವೈದ್ಯರುಗಳು ಆಧಾರ ಗುರುತಿನ ಚೀಟಿ/ಪಾನ್‌ಕಾರ್ಡ್/ವಾಹನ ಚಾಲನಾ ಪರವಾನಗಿ ಪತ್ರ ಕಡ್ಡಾಯವಾಗಿ ತರತಕ್ಕದ್ದು.

RLP 11.3.22

**ಆಯುಕ್ತರು,**
ಆರೋಗ್ಯ ಮತ್ತು ಕು.ಕ.ಸೇವೆಗಳು.
ಬೆಂಗಳೂರು.

**ಪ್ರತಿಯನ್ನು:–**

1) ದಿನಾಂಕ 22.12.2021 ಮತ್ತು 14.01.2022 ರಂದು ಒಂದು ವರ್ಷ ಕಡ್ಡಾಯ ಸರ್ಕಾರಿ ಸೇವೆಗೆ ನಿಯುಕ್ತಿಗೊಳಿಸಿರುವ ತಜ್ಞ ವೈದ್ಯರುಗಳ ಮಾಹಿತಿಗಾಗಿ.
2) ಸಂಬಂಧಪಟ್ಟ ಸಂಸ್ಥೆಗಳಿಗೆ.
3) ಐಟಿ ಕನ್ಸಲ್ಟೆಂಟ್, ಆರೋಗ್ಯ ಇಲಾಖೆ, ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು,